ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ. Annexure III

## ಕರ್ನಾಟಕ ಸರ್ಕಾರ

ಸಂಖ್ಯೆ:ಆರ್‌ಡಿ 23 ಎಲ್‌ಜಿಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:05.03.2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ:

ಜಿಲ್ಲಾಧಿಕಾರಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

ಮಾನ್ಯರೆ,

ವಿಷಯ: ಹೊಸಪೇಟೆ ತಾಲ್ಲೂಕು, ಕಮಲಾಪುರ ಹೋಬಳಿಯ 76 ವೆಂಕಟಾಪುರ ಗ್ರಾಮದ ಸ.ನಂ.871/8 ವಿಸ್ತೀರ್ಣ140.79(57 ಹೆಕ್ಟರ್) ಜಮೀನನ್ನು ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಇದೇ ಸಮಸಂಖ್ಯೆಯ ಪತ್ರ ದಿನಾಂಕ:27.01.2020
2) ತಮ್ಮ ಪತ್ರ ಸಂಖ್ಯೆ: ಕಂ/ಭೂಮಿ/07, 03/2019-20, ದಿನಾಂಕ: 22-02-2020

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪೂರ್ವಾನುಮೋದನೆಯನ್ನು ನೀಡಿ ಹೊರಡಿಸಲಾಗಿರುವ ಉಲ್ಲೇಖ-1ರ ಪತ್ರವನ್ನು ಹಿಂಪಡೆಯಲಾಗಿದೆ.

ಮುಂದುವರೆದು ಉಲ್ಲೇಖ-2ರ ಪತ್ರದಲ್ಲಿ ಜಿಲ್ಲಾಧಿಕಾರಿ, ಬಳ್ಳಾರಿ ಇವರು ಕೋರಿರುವುದನ್ನು ಪರಿಗಣಿಸಿ ಬಳ್ಳಾರಿ ನಗರದಲ್ಲಿ ಹಾಲಿ ಇದ್ದ ಮೃಗಾಲಯವನ್ನು ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಾಲಾಪುರ ಗ್ರಾಮದ ಬಿಳಿಕಲ್ಲು ಪಶ್ಚಿಮ ಭಾಗದ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ವರ್ಗಾಯಿಸಿ ಇದಕ್ಕೆ "ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್" ಎಂದು ನಾಮಕರಣ ಮಾಡಿದ್ದು, ಈ ಉದ್ದೇಶಕ್ಕಾಗಿ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದ ಇಂಗಳಗಿ ಹಾಗೂ ಕಮಲಾಪುರ ಕಾಯ್ದಿಟ್ಟ ಅರಣ್ಯ ಪ್ರದೇಶ ಹಾಗೂ ಪಟ್ಟ ಜಮೀನು ಸೇರಿ ಒಟ್ಟು 141-49 ಎಕರೆ ಅರಣ್ಯ ಪ್ರದೇಶವನ್ನು ಕರ್ನಾಟಕ ಅರಣ್ಯ ಪ್ರಾಧಿಕಾರ, ಮೈಸೂರು ಇವರಿಗೆ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ನಿರ್ಮಾಣಕ್ಕಾಗಿ ಹಸ್ತಾಂತರಿಸಲಾಗಿರುತ್ತದೆ. ಇದಕ್ಕೆ ಪರ್ಯಾಯವಾಗಿ ಹೊಸಪೇಟೆ ತಾಲ್ಲೂಕು, ಕಮಲಾಪುರ ಹೋಬಳಿಯ 76 ವೆಂಕಟಾಪುರ ಗ್ರಾಮದ ಸ.ನಂ.871/8 ವಿಸ್ತೀರ್ಣ 140-79(57 ಹೆಕ್ಟರ್) "ಕೊಂಡ/ಕಲ್ಲು ಗುಡ್ಡ" ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68ರಡಿ ಕ್ರಮವಹಿಸುವ ಬಗ್ಗೆ ವಿನಾಯಿತಿ ನೀಡಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22ಎ(3)(i)ರನ್ವಯ ಪರಿಹಾರಾತ್ಮಕ ನೆಡೆತೋಪು ಬೆಳೆಸಲು ಅರಣ್ಯ ಇಲಾಖೆಗೆ ಉಚಿತವಾಗಿ ಹಸ್ತಾಂತರಿಸಲು ಸರ್ಕಾರದ ಪೂರ್ವಾನುಮೋದನೆಯನ್ನು ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ಪ್ರಸ್ತಾವನೆ ಸಂಬಂಧಿಸಿದ ವಿಶಿಷ್ಟ ಕಡತವನ್ನು ಈ ಪತ್ರಕ್ಕೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

5/3/20.

(ಎಂ.ಇ. ಚನ್ನಬಸವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-3)

Scanned by CamScanner

Scanned with CamScanner

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ ಜಿಲ್ಲೆ, ಬಳ್ಳಾರಿ 583101

OFFICE OF THE DEPUTY COMMISSIONER, BELLARY DISTRICT, BELLARY 583101

Telephone : 08392-277100, Fax : 08392-272538 Email: dcbellary@gmail.com

ಸಂ/ಕಂ/ಭೂಮಿ/07, 03/2019-20

ದಿನಾಂಕ 5-03-2020

## -: ನಡವಳಿಗಳು :-

ವಿಷಯ - ಹೊಸಪೇಟೆ ತಾಲೂಕು ನಂ 76 ವೆಂಕಟಾಪುರ ಗ್ರಾಮದ ಸ.ನಂ 871/8 ಪೈಕಿ ವಿಸ್ತೀರ್ಣ 140.79 ಎಕರೆ (57.00 ಹೆಕ್ಟೇರ್) ಸರ್ಕಾರಿ ಜಮೀನನ್ನು ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕ ಸ್ಥಾಪಿಸಲು ಪರಿಹಾರಾತ್ಮಕ ನೆಡುತೋಪು ಬೆಳಸಲು ಅರಣ್ಯ ಇಲಾಖೆಗೆ ಮಂಜೂರು ಮಾಡುವ ಕುರಿತು.

ಉಲ್ಲೇಖ:- 1) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವಿಭಾಗ ಬಳ್ಳಾರಿ ಇವರ ಪತ್ರ ಸಂಖ್ಯೆ/ಎ7/ಭೂಮಿ/ಎ.ಬಿ.ಯುಡ್/ಬ.ವಿ/ಸಿ.ಆರ್-3/13-14 ದಿನಾಂಕ 05-06-18.

2) ತಹಶೀಲ್ದಾರರು ಹೊಸಪೇಟೆ ಇವರ ಪತ್ರ ಸಂಖ್ಯೆ/15/2019-20 ದಿನಾಂಕ 03-08-2019.

3) ಸಹಾಯಕ ಆಯುಕ್ತರು ಹೊಸಪೇಟೆ ಇವರ ಪತ್ರ ಸಂಖ್ಯೆ/55/2019-20 ದಿನಾಂಕ 08-08-2019.

4) ಈ ಕಾರ್ಯಾಲಯದ ಪತ್ರ ಸಮ ಸಂಖ್ಯೆ ದಿನಾಂಕ 27-09-2019, 15-11-19, 22-02-2020.

5) ಸರ್ಕಾರದ ಪತ್ರ ಸಂಖ್ಯೆ/ಆರ್.ಡಿ/23/ಎಲ್.ಜಿ.ಇ/2019 ದಿನಾಂಕ 05-03-2020.

* * * * *

ಪೀಠಿಕೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವಿಭಾಗ ಬಳ್ಳಾರಿ ಇವರು, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕನ್ನು ಹೊಸಪೇಟೆ ತಾಲೂಕು ಬಿಳಿಕಲ್ ಪೆಸ್ಟ್ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ನಂ 76-ವೆಂಕಟಾಪುರ ಗ್ರಾಮದ ಸ.ನಂ 871/8 ರಲ್ಲಿ ಅರಣ್ಯೇತರ ಜಮೀನನ್ನು ಪರಿಹಾರಾತ್ಮಕ ನೆಡುತೋಪು ಬೆಳಸಲು ವಿಸ್ತೀರ್ಣ 140.85 ಎಕರೆ (57.00 ಹೆಕ್ಟೇರ್) ಸರ್ಕಾರಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಉಲ್ಲೇಖಿತ (1) ರ ಪತ್ರದಲ್ಲಿ ಕೋರಿರುತ್ತಾರೆ.

ಉಲ್ಲೇಖಿತ (2) ಮತ್ತು (3) ರ ಅನ್ವಯ ತಹಶೀಲ್ದಾರರು ಹೊಸಪೇಟೆ ಮತ್ತು ಸಹಾಯಕ ಆಯುಕ್ತರು ಹೊಸಪೇಟೆ ಇವರು, ಹೊಸಪೇಟೆ ತಾಲೂಕು ನಂ 76 ವೆಂಕಟಾಪುರ ಗ್ರಾಮದ ಸ.ನಂ 871/8 ಪೈಕಿ ವಿಸ್ತೀರ್ಣ 140.79 ಎಕರೆ (57.00 ಹೆಕ್ಟೇರ್) ಸರ್ಕಾರಿ ಜಮೀನನ್ನು ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕ ಸ್ಥಾಪಿಸಲು ಪರಿಹಾರಾತ್ಮಕ ನೆಡುತೋಪು ಬೆಳಸಲು ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಪ್ರಸ್ತಾವನೆಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

Scanned with CamScanner

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕಮಲಾಪುರ ಹೋಬಳಿಯ 76-ವೆಂಕಟಾಪುರ ಗ್ರಾಮದ ಸ.ನಂ. 871/8 ಜಮೀನು ದಯಾಗ್ಲಾಟ್ ಪ್ರಕಾರ " ಜಿ.ಯು ಕೊಂಡ" ಎಂದು ಮತ್ತು ಪಹಣಿ ಪ್ರಕಾರ " ಕಲ್ಲುಗುಡ್ಡ ಮತ್ತು ಕರ್ನಾಟಕ ಸರ್ಕಾರ " ಎಂದು ನಮೂದನೆ ಆಗಿರುತ್ತದೆ. ತಹಶೀಲ್ದಾರರು ಹೊಸಪೇಟೆ ಇವರು. ದಿನಾಂಕ 01-06-2019 ರಂದು ಕಂದಾಯ ನಿರೀಕ್ಷಕರೊಂದಿಗೆ ಸ್ಥಳ ತನಿಖೆ ಮಾಡಿ ಸದರಿ ಜಮೀನು ಕಲ್ಲುಗುಡ್ಡಗಳಿಂದ ಹಾಗೂ ಕುರುಚಲು ಗಿಡಗಳಿಂದ ಕೂಡಿದ್ದು, ಸ್ಮಾರಕಗಳಾಗಲೀ, ಒತ್ತುವರಿಯಾಗಲೀ, ಇರುವುದಿಲ್ಲವೆಂದು ಫಾರಂ 50, 53 ಮತ್ತು 57 ಅರ್ಜಿಗಳು ಬಾಕಿ ಇರುವುದಿಲ್ಲ, ಸದರಿ ಜಮೀನಿನಲ್ಲಿ ಯಾವುದೇ ಒತ್ತುವರಿ ಹಾಗೂ ಅನಧಿಕೃತ ಸಾಗುವಳಿ ಇರುವುದಿಲ್ಲ. ಪ್ರಸ್ತುತ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಕೋರಿರುವ ಪ್ರದೇಶವಾಗಿರುವುದಿಲ್ಲ. ಉದ್ದೇಶಿತ ಜಮೀನು 76-ವೆಂಕಟಾಪುರ ಗ್ರಾಮದಿಂದ ಸುಮಾರು 05 ಕಿ.ಮೀ ದೂರದಲ್ಲಿ ಇರುತ್ತದೆ. ನೆಡುತೋಪು ಬೆಳೆಸಲು ಯೋಗ್ಯವಾದ ಪ್ರದೇಶವಾಗಿರುತ್ತದೆಂದು ತಹಶೀಲ್ದಾರರು ಮತ್ತು ಸಹಾಯಕ ಆಯುಕ್ತರು ಹೊಸಪೇಟೆ ಇವರ ವರದಿ ಅನ್ವಯ ಪ್ರಸ್ತಾಪಿತ ಜಮೀನನ್ನು ಮೇಲಿನ ಉದ್ದೇಶಕ್ಕೆ ಕಾಯ್ದಿರಿಸಿ ವರ್ಗಾವಣೆ ಉಲ್ಲೇಖಿತ (4) ರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಪತ್ರದ ಉಲ್ಲೇಖಿತ (5) ರ ಅನ್ವಯ ಬಳ್ಳಾರಿ ನಗರದಲ್ಲಿ ಹಾಲಿ ಇದ್ದ ಮೃಗಾಲಯವನ್ನು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕು ಕಮಲಾಪುರ ಗ್ರಾಮದ ಬಿಳಿಕಲ್ಲು ಪಶ್ಚಿಮ ಭಾಗದ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ವರ್ಗಾಯಿಸಿ ಇದಕ್ಕೆ "ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ" ಎಂದು ನಾಮಕರಣ ಮಾಡಿರುವ ಉದ್ದೇಶಕ್ಕಾಗಿ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದ ಇಂಗಳಗಿ ಹಾಗೂ ಕಮಲಾಪುರ ಕಾಯ್ದಿಟ್ಟ ಅರಣ್ಯ ಪ್ರದೇಶ ಹಾಗೂ ಪಟ್ಟಾ ಜಮೀನು ಸೇರಿ ಒಟ್ಟು 141.49 ಎಕರೆ ಅರಣ್ಯ ಪ್ರದೇಶವನ್ನು ಕರ್ನಾಟಕ ಅರಣ್ಯ ಪ್ರಾಧಿಕಾರ, ಮೈಸೂರು ಇವರಿಗೆ ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕ ನಿರ್ಮಾಣಕ್ಕಾಗಿ ಹಸ್ತಾಂತರಿಸಲಾಗಿರುತ್ತವೆ. ಇದಕ್ಕೆ ಪರ್ಯಾಯವಾಗಿ ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿಯ 76-ವೆಂಕಟಾಪುರ ಗ್ರಾಮದ ಸ.ನಂ 871/8 ಪೈಕಿ ವಿಸ್ತೀರ್ಣ 140.79 ಎಕರೆ (57.00 ಹೆಕ್ಟರ್) "ಕೊಂಡ / ಕಲ್ಲುಗುಡ್ಡ " ಸರ್ಕಾರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68 ಅಡಿ ಕ್ರಮವಹಿಸುವ ಬಗ್ಗೆ ವಿನಾಯಿತಿ ನೀಡಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 22ಎ(3)(i) ರನ್ವಯ ಪರಿಹಾರಾತ್ಮಕ ನಡತೋಪು ಬೆಳಸಲು ಅರಣ್ಯ ಇಲಾಖೆಗೆ ಉಚಿತವಾಗಿ ಹಸ್ತಾಂತರಿಸಲು ಸರ್ಕಾರದ ಪೂರ್ವಾನುಮೋದನೆ ನೀಡಿರುತ್ತಾರೆ.

ಆದ್ದರಿಂದ ತಹಶೀಲ್ದಾರರು ಹೊಸಪೇಟೆ ಮತ್ತು ಸಹಾಯಕ ಆಯುಕ್ತರು ಹೊಸಪೇಟೆ ಇವರ ವರದಿ ಹಾಗೂ ಸರ್ಕಾರದ ಪೂರ್ವಾನುಮೋದನೆಯ ಹಿನ್ನಲೆಯಲ್ಲಿ ಅರಣ್ಯ ಇಲಾಖೆಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕೆ ಅಂದರೆ ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕ ಸ್ಥಾಪಿಸಲು ಉಪಯೋಗಿಸಿರುವುದರಿಂದ ಇದರ ಸಮಾನಂತರವಾದ ವಿಸ್ತೀರ್ಣವನ್ನು ಅರಣ್ಯ ಇಲಾಖೆಗೆ ಮಂಜೂರು ಮಾಡಲು ಈ ಕೆಳಕಂಡ ಆದೇಶ.

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಹೊಸಪೇಟೆ ತಾಲೂಕು ನಂ 76 ವೆಂಕಟಾಪುರ ಗ್ರಾಮದ ಸ.ನಂ 871/8 ಪೈಕಿ ವಿಸ್ತೀರ್ಣ 140.79 ಎಕರೆ (57.00 ಹೆಕ್ಟರ್) ಸರ್ಕಾರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 22ಎ(3)(i) ರ ಅನ್ವಯ ಉಚಿತವಾಗಿ ಪರಿಹಾರಾತ್ಮಕ ನಡುತೋಪು ಬೆಳಸಲು ಅರಣ್ಯ ಇಲಾಖೆಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರು ಮಾಡಿ ಆದೇಶಿಸಲಾಗಿದೆ

Scanned with CamScanner

## ಚೆಕ್ಕುಬಂದಿ

ಪೂರ್ವಕ್ಕೆ - ಬುಕ್ಕಸಾಗರ ಗ್ರಾಮದ ಗಡಿ

ಪಶ್ಚಿಮಕ್ಕೆ - ಸ ನಂ 877/8 ರ ಉಳಿದ ಜಮೀನು

ಉತ್ತರಕ್ಕೆ - ಸ ನಂ 862 ರ ಜಮೀನು

ದಕ್ಷಿಣಕ್ಕೆ - ಸ ನಂ 1247 & 1246 ರ ಜಮೀನುಗಳು

## ಷರತ್ತುಗಳು

1) ವರ್ಗಾವಣೆಯಾದ ಜಮೀನನ್ನು ಅರಣ್ಯ ಇಲಾಖೆಯು ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2) ವರ್ಗಾವಣೆಯಾದ ಜಮೀನಿನಲ್ಲಿ ನಾಲ, ಹಳ್ಳ ಹರಿಯುತ್ತಿದ್ದಾರೆ ಅದರ ಸ್ವಾಭಾವಿಕ ಹರಿವಿಗೆ ಅಡ್ಡಪಡಿಸಬಾರದು.
3) ಪ್ರಸ್ತಾಪಿತ ಜಮೀನಿನಲ್ಲಿ ಜಾನುವಾರುಗಳು ಮೇಯುವಿಕೆಗೆ ಅವಕಾಶ ಮಾಡಿಕೊಡತಕ್ಕದ್ದು.
4) ಪ್ರಸ್ತಾಪಿತ ಜಮೀನಿನಲ್ಲಿ ರಸ್ತೆಗಳು ಹಾಯ್ದು ಹೋಗಿದ್ದಲ್ಲಿ ಸದರಿ ರಸ್ತೆಗಳಿಗೆ ಅಡ್ಡಿ ಮಾಡತಕ್ಕದ್ದಲ್ಲ ಹಾಗೂ ಸದರಿ ರಸ್ತೆಗಳಲ್ಲಿ ಸಾರ್ವಜನಿಕರಿಗೆ ಓಡಾಡಲು ಅವಕಾಶ ಮಾಡತಕ್ಕದ್ದು.
5) ಈ ಮೇಲ್ಕಂಡ ಷರತ್ತುಗಳೊಂದಿಗೆ ಸರ್ಕಾರದಿಂದ ಅನ್ವಯವಾಗುವ ಎಲ್ಲಾ ಕಾಯ್ದೆ ಕಾನೂನು ಹಾಗೂ ಷರತ್ತು ನಿಬಂಧನೆಗೊಳಪಡಿಸುವುದು.

5/3/2020

ಜಿಲ್ಲಾಧಿಕಾರಿಗಳು

ಬಳ್ಳಾರಿ

ಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು

ಬಳ್ಳಾರಿ ವಿಭಾಗ

ಬಳ್ಳಾರಿ.

ಪ್ರತಿಯನ್ನು,

1) ಸಹಾಯಕ ಆಯುಕ್ತರು ಹೊಸಪೇಟೆ ಇವರಿಗೆ ಮಾಹಿತಿಗಾಗಿ.
2) ತಹಶೀಲ್ದಾರರು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಕಾರ್ಯನಿರ್ವಾಹಕರು ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ.ಅಟಲ್ ಬಿಹಾರಿ ವಾಜಪೇಯಿ ಜ್ಯೂಲಾಜಿಕಲ್ ಪಾರ್ಕ್ ಕಮಲಾಪುರ ಹೊಸಪೇಟೆ ತಾಲೂಕು ಇವರಿಗೆ ಮಾಹಿತಿಗಾಗಿ.

Scanned with CamScanner